ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಮಠಗಳ ಮುಂಭಾಗದಲ್ಲಿ ರಾಜಕಾರಣಿಗಳಿಗೆ ಪ್ರವೇಶವಿಲ್ಲ ಎಂಬ ಫಲಕ ತೂಗುಹಾಕಿದರೆ?*



ಉಪಯೋಗವಿಲ್ಲ; ಅವರು ಬರುವುದೇ ಹಿತ್ತಿಲ ಬಾಗಿಲಿಂದ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಆರೋಗ್ಯ; ಇದರ ನಿಜವಾದ ಅರ್ಥ?*
ಇದ್ದರೆ ನಮಗೆ, ಹದಗೆಟ್ಟರೆ ವೈದ್ಯರಿಗೆ, ಇನ್ನೂ ಹದಗೆಟ್ಟರೆ ನಾಲ್ಕು ಜನರಿಗೆ ಉಪಯೋಗವಾಗುವ ವಸ್ತು!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ
*ಇಂದಿನ ದಿನಮಾನದಲ್ಲಿ ಸಪ್ತ ಪಾತಕಗಳು ಯಾವುವು?*
ರೌಡಿಗಳ ಟೀಕೆ, ವಕೀಲರ ಟೀಕೆ, ನಿಜ ಹೇಳುವುದು, ನಿಯತ್ತಾಗಿರುವುದು, ಸಜ್ಜನರನ್ನು ಹೊಗಳುವುದು, ತಾಯಿನಾಡನ್ನು ಹೊಗಳುವುದು, ಕನ್ನಡ ಮಾತನಾಡುವುದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ದ್ರೌಪದಿಯ ಸೀರೆ ಸೆಳೆಯುವಾಗ ಭೀಷ್ಮ, ದ್ರೋಣ, ಕೃಪಾಚಾರ್ಯರೆಲ್ಲಾ ಏನೂ ಮಾತಾಡಲೇ ಇಲ್ಲವಲ್ಲಾ, ಏಕೆ?*
ರೇಪ್ ಸೀನ್‌ನ ಶಕ್ತಿಯೇ ಅಂತಹದ್ದು; ಒಂದು ಮಟ್ಟ ತಲುಪುವವರೆಗೆ ಹೀರೋ ಸಹ ಸದ್ದಿಲ್ಲದೆ ನೋಡುತ್ತಲೇ ಇರುತ್ತಾನೆ!

ಸುಧಾ ರಾಜ್, ಮೈಸೂರು
*ನಿಮಗೆ ಚಾಮುಂಡಿ ತರಹ ಹಲವಾರು ಕೈಗಳಿದ್ದಿದ್ದರೆ ಏನು ಮಾಡುತ್ತಿದ್ದೀರಿ?*



ಹಲವಾರು ರಸ್ತೆಗಳು ಸೇರುವ ಜಾಗದಲ್ಲಿ ಟ್ರಾಫಿಕ್ ಪೊಲೀಸ್ ಆಗುತ್ತಿದ್ದೆ!

ರಮೇಶ. ಜಿ. ಬೊಂಗಾಳೆ, ಬೈಲಹೊಂಗಲ
*ಮದುವೆ ಎಂಬ ಬಂಧನದ ನಿಜವಾದ ಅರ್ಥವೇನು ಸಾರ್?*
ಚದುರ– ಚದುರೆಯರ ಆದರ– ಸದರದ ಸರಿ–ಗಮ!

ಆರ್. ಮಧುಸೂದನ್, ಹಾಸನ
*ತಾನು ಹುಟ್ಟಿದ ರಾಜ್ಯಕ್ಕೇ ಅನ್ಯಾಯವಾಗುತ್ತಿರುವುದನ್ನು ಕಂಡು ಕಾವೇರಿ ನದಿ ತನ್ನ ದಿಕ್ಕನ್ನೇ ಬದಲಿಸಿದರೆ ಏನಾಗಬಹುದು?*
ಕಾವೇರುವ ದಿಕ್ಕು ಬದಲಾಗಬಹುದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಪುರುಷಾರ್ಥ : ಏನು ಇದರ ಅರ್ಥ?*
ಪುರುಷ ಉರುಫ್ ವರ ಕೇಳುವ, ಅರ್ಥ ಉರುಫ್ ಹಣ ವರದಕ್ಷಿಣೆ!

ಪಾಣತ್ತಲೆ ಜೀವಿತ ಸುಬ್ರಾಯ, ಕುಂದಚೇರಿ
*ಸಂಶಯ ಎಂಬ ಭೂತ ತಮ್ಮ ಮನಸ್ಸನ್ನು ಹೊಕ್ಕಾಗ ಏನಾಗುತ್ತದೆ?*
ಥೂ! ಅನುಮಾನದ ಪಿಶಾಚಿ ಎಂದು ಉಗಿಸಿಕೊಳ್ಳುವುದೇ ಆಗುತ್ತದೆ!

ಆರಿಫ್, ದಾವಣಗೆರೆ
*ಕೋಪಕ್ಕೊಂದು ಕಾರಣ ಬೇಕು. ಆದರೆ ಕೆಲವು ಹುಡುಗಿಯರು ಕಾರಣವಿಲ್ಲದೆಯೇ ಕೋಪಿಸಿಕೊಳ್ಳುವರಲ್ಲಾ, ಏಕೆ?*
ನೀವೇ ಕಾರಣ! ಕೋಪಗೊಂಡಾಗ ನೀನು ಬಲು ಚೆಲುವೆ ಎನ್ನುವಿರಿ; ಚೆನ್ನಾಗಿ ಕಾಣಲು ಅವಳು ರಂಗಾಗುತ್ತಾಳೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಗರ್ಭಿಣಿ ಸ್ತ್ರೀಯರು ಮಣ್ಣು ತಿನ್ನುವುದೇಕೆ?*
ಮುಂದೆ ಮಂತ್ರಿಯಾಗಬಹುದಾದ ಮಣ್ಣಿನ ಮಗ ಹುಟ್ಟಲೆಂದು!

ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು
*ಒಂದು ಡೌಟ್; ಕಾಯಕವೇ ಕೈಲಾಸವೋ, ಅಥವಾ ಕಾಸಿದ್ರೆ ಕೈಲಾಸವೋ?*
ಬಸವಣ್ಣನವರಂತೆ ಜೀವಿಸಿದರೆ ಕಾಯಕವೇ ಕೈಲಾಸ; ಕೋಲೆಬಸವನಂತೆ ಜೀವಿಸಿದರೆ ಕಾಸಿದ್ರೆ ಕೈಲಾಸ!

ಹೆಚ್.ಎಸ್. ವಿಶ್ವನಾಥ್, ಶಿವಮೊಗ್ಗ
*ಹುಚ್ಚುಂಡೆ ಮದ್ವೇಲಿ ಉಂಡೋನೇ ಜಾಣ ಅಂತಾರಲ್ಲ, ಹುಚ್ಚುಂಡೆಗೆ ಮದುವೆ ಆಗುತ್ತದೆಯೆ?*
ಮನಸ್ಸಿನ ವಿಕಾರಕ್ಕಿಂತ ದೇಹದ ಆಕಾರಕ್ಕೆ ಬೀಳೋ ಮಂಗ್ಮುಂಡೇವು ಇರೋವರ್ಗೂ ಆಗತ್ತೆ!

ಎಂ.ಶಿವಕುಮಾರ್, ಮಂಗಳೂರು
*ಹೆಣ್ಣು ಬೆಳದಿಂಗಳ ಬಾಲೆಯಾದರೆ ಗಂಡು...?*
ಬೆಳದಿಂಗಳು ಮತ್ತು ಬಾಲೆ ಎರಡರ ಡಬಲ್ ಎಫೆಕ್ಟ್‌ನಿಂದ ಫುಲ್‌ಟೈಮ್ ಹುಚ್ಚ!

## ಬಹುಮಾನಿತ ಪ್ರಶ್ನೆ

ಡಿ.ಎಲ್.ನಾಗರಾಜ್, ಚನ್ನಗಿರಿ
*ಡಾರ್ಲಿಂಗ ಪುಲ್ಲಿಂಗವೋ, ಸ್ತ್ರೀಲಿಂಗವೋ?*
ಇಷ್ಟಲಿಂಗ!

ಪದ್ಮಜಾ ಸುಂದರೇಶ್, ಮೈಸೂರು
*ಅಪ್ಪ, ಅಮ್ಮ, ಮಕ್ಕಳ ದಿನಗಳಿರುವಂತೆ ಅತ್ತೆ, ಸೊಸೆಯ ದಿನಗಳೇಕಿಲ್ಲ?*
ಇವೆಯಲ್ಲಾ! ಮಾವನ/ಅಳಿಯನ ಸಂಬಳ/ಬೋನಸ್ ಬಂದ ದಿನಗಳೆಲ್ಲಾ ಅತ್ತೆ/ಸೊಸೆಯ ದಿನಗಳೇ!

ಎಂಎಸ್. ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಹ ಕಾರದಿಂದ ಪ್ರಾರಂಭವಾಗುವ ಹೆಣ್ಣು, ಹೊನ್ನು, ಹೆಂಡದ ಹಿಂದೆ ಬಿದ್ದವರ ಜೀವನದಲ್ಲಿ ಹಾಹಾಕಾರವೇಳಲು ಕಾರಣವೇನು?*
ಹೆಂಡದಿಂದ ತನು, ಹೆಣ್ಣಿನಿಂದ ಮನ, ಹೊನ್ನಿನಿಂದ ಧನ ಹಾಳಾಗುವುದರಿಂದ!

ಪಿ.ಜೆ. ರಾಘವೇಂದ್ರ, ಮೈಸೂರು
*ಗೌಡರ ಅಳುವಿಗೂ, ಮೊಸಳೆ ಕಣ್ಣೀರಿಗೂ ಏನು ವ್ಯತ್ಯಾಸ?*



ಮೊಸಳೆಗಳು ಹೊಟ್ಟೆಪಾಡಿಗಾಗಿ ಮಾತ್ರ ಅಳುತ್ತವೆ!

ಶಿವಮೊಗ್ಗ ರಮೇಶ್, ಮೈಸೂರು
*ಇತ್ತೀಚೆಗೆ ಕೆಲವು ಪತ್ರಕರ್ತರ ನಡವಳಿಕೆ ತೀರಾ ಅಸಹ್ಯಕರವಾಗಿದೆಯಲ್ಲಾ...?*
ಸಹಜವೇ; ಶುಚಿ ಮಾಡದ ಬಚ್ಚಲು ತೊಳೆಯುವ ಪೊರಕೆ ಬಚ್ಚಲಿಗಿಂತಲೂ ಕೊಳಕು!

ಎನ್.ಎಸ್. ಆನಂದ, ಬೆಂಗಳೂರು
*ವಿವಾಹದಿಂದ ಪಾರಾಗಲು ಬ್ರಹ್ಮಚರ್ಯ; ಬ್ರಹ್ಮಚರ್ಯದಿಂದ ಪಾರಾಗಲು...?*
ಬಿಡದಿಯ ಆಶ್ರಮ!

ಎನ್.ವಸಂತಾ, ಕತ್ತರಗುಪ್ಪೆ
*ಚಲಿಸುವ ಸಾರಿಗೆ ವಾಹನದ ಚಾಲಕ ನಿದ್ರೆಗೆ ಶರಣಾದರೆ ಪ್ರಯಾಣಿಕರ ಗತಿಯೇನು ಶಿವಾ?*
ನರ್ಸಿಂಗ್ ಹೋಂ ಖರ್ಚೂ ಉಳಿತಾಯ, ಒನ್ ವೇ ಟಿಕೆಟ್!

ಜಾಕೋಬ್ ಡಿಸೋಜ, ಕುರುವಳ್ಳಿ
*ಆಸೆಗೂ, ಕನಸಿಗೂ ವ್ಯತ್ಯಾಸವಿದೆಯಾ ಸಾರ್?*
ಆಸೆ ಪಡಲು ನಿದ್ರೆ ಮಾಡಬೇಕಾಗಿಲ್ಲ.

■ ರಾಮ್